## ನವಿಲುಗನ್ನಡಿ

- ಮುಖಪುಟ ಚೇತೋಹಾರಿಯಾಗಿದೆ. ಈ ಸಂಚಿಕೆಯ ಕತೆಗಳು ಬಹುಕಾಲ ಕಾಡಿದವು.

**ಸದಾನಂದ ಮಯ್ಯ, ಉಜಿರೆ**

- ‘ಅರಬ್ ದೇಶಗಳ ಸಂಕಷ್ಟಗಳ ನಿರೂಪಣೆ’ ಲೇಖನದಲ್ಲಿ ವಸುಧೇಂದ್ರ ಅವರು ಜೆಸಿಬಿ ಬಹುಮಾನ ಪಡೆದ ಕಾದಂಬರಿಕಾರ ಬೆನ್ಯಾಮಿನ್ ಹಾಗೂ ಅವರ ಪ್ರಶಸ್ತಿ ಪುರಸ್ಕೃತ ಕೃತಿಯನ್ನು ಸೊಗಸಾಗಿ ಪರಿಚಯಿಸಿದ್ದಾರೆ.

**ನೀಲವೇಣಿ, ಪುಣೆ**

- ದೀಪ್ತಿ ಭದ್ರಾವತಿ ಅವರ ‘ಕೋಶ’ ಕತೆ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ಸಚ್ಚಿದಾನಂದ ಹೆಗಡೆ ಅವರ ‘ಬೆತ್ತಲೆ’ ನೀಳ್ಗತೆ ಇಷ್ಟವಾಯಿತು.

**ಜಿ.ಎಸ್. ರವೀಂದ್ರ, ಮಂಡ್ಯ**

- ಎಸ್. ನಟರಾಜ ಬೂದಾಳು ಅವರ ಕಥೆ ‘ರಂಗೋಲಿ’ ಸುಂದರ ರೇಷ್ಮೆ ಬಟ್ಟೆಯಲ್ಲಿ ನೇಯ್ದ ಮನಮೋಹಕ ಕುಸುರಿ ಕಲೆಯಂತಿದೆ.


**ಕನಕಪ್ಪ ವಾಗನಗೇರಿ**

- ಛಾಯಾ ಭಟ್ ಅವರ ‘ಆ ಕಡುಗಪ್ಪು ಕಣ್ಣುಗಳು’ ಉತ್ತಮ ಕಥೆ. ಅಪರಾಧಿ ಭಾವದ ನೈಜ ನಿರೂಪಣೆ.

**ದೀಪಕ ಜೋಶಿ, ಬೆಳಗಾವಿ**

- ಅಬ್ಬಾಸ್ ಮೇಲಿನಮನಿ ಅವರ, ‘ಬದುಕು ಮತ್ತು ಬಾವುಟ’ ಕತೆ ಓದಿಸಿಕೊಳ್ಳುತ್ತದೆ.

**ಪಿ. ಜಯವಂತ ಪೈ, ಕುಂದಾಪುರ**




- ಕೆ.ವಿ. ರಾಜಲಕ್ಷ್ಮಿ ಅವರ ಲಹರಿಯಂತಹ ಕತೆ ‘ಸುರಿವ ಮಳೆಯು ನೀನು’ ಓದುತ್ತಿದ್ದಂತೆ ಕಣ್ಣಾಲಿಗಳು ತುಂಬಿಬಂದವು. ಕತೆ ಸರಳ ನಿರೂಪಣೆ, ಆರ್ದ್ರ ಶೈಲಿಯಿಂದ ಓದುಗರನ್ನು ಸೆಳೆಯುತ್ತದೆ.

**ಸವಿತಾ ಬಗಲಿ, ಹುಬ್ಬಳ್ಳಿ**

- ‘ಮಾತು–ಕತೆ’ಯಲ್ಲಿ ಕನ್ನಡದ ಮೆಲುದನಿಯ ಕವಯಿತ್ರಿ ಸವಿತಾ ನಾಗಭೂಷಣ ಅವರ ಸಂದರ್ಶನ (ಕವಿತೆ: ಒಂದು ಹಣತೆಯಿಂದ ಇನ್ನೊಂದು ಹಣತೆಯನ್ನು ಬೆಳಗಿದಂತೆ) ಸೊಗಸಾಗಿದೆ.

**ಅಭಿಷೇಕ್, ವಿಜಯಪುರ**

- ‘ಈ ಕಾಲದ ಕಥನ’ ಒಂದು ಯಶಸ್ವಿ ಪ್ರಯೋಗ. ಹಳಬರನ್ನು, ಹೊಸಬರನ್ನು ಕೂಡಿಸಿಕೊಂಡು ಸಾಗುವ ಇಂತಹ ಪ್ರಯತ್ನಗಳು ಸ್ವಾಗತಾರ್ಹ.

**ನಂದಕುಮಾರ, ಬೆಂಗಳೂರು**